ಪೋಲೀಸ್ ಅಧಿಕಾರಿಗಳ ನೇಮಕಾತಿ ನಿಯಮದ ಬಗ್ಗೆ

೧೬೯೧. ಶ್ರೀ ಗೋಪಾಲ ಮಯ್ಯಾಂದ ಕಾನಡೆ(ಸಿರ್ಸಿ)--ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೋಲೀಸ್ ಇಲಾಖೆಯ ಅಪರಾಧ, ಕಾನೂನು ಮತ್ತು ಸುವ್ಯವಸ್ಥೆ ಸಂಚಾರಿ ಹಾಗೂ ವಿಶೇಷದಳಗಳ ವಿಭಾಗಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುವಲ್ಲಿ ಆಯಾಯ ವಿಭಾಗಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ನೇಮಕಾತಿ ನಿಯಮಗಳೇನಾದರೂ ಇವೆಯೆ?

ಆ) ಹಾಗಿದ್ದಲ್ಲಿ ಆ ನಿಯಮಗಳಾವುವು?

ಇ) ಹಾಗಿಲ್ಲದಿದ್ದರೆ ಯಾವ ಆಧಾರಗಳ ಮೇಲೆ ನೇಮಕಾತಿಗಳನ್ನು ಕೈಕೊಳ್ಳಲಾಗಿದೆ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು)

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ನೇಮಕಾತಿಗಳನ್ನು ಕರ್ನಾಟಕ ರಾಜ್ಯ ಪೋಲೀಸು ಸೇವಾ (ರಿಕ್ರೂಟ್‌ಮೆಂಟ್) ನಿಯಮಾವಳಿಗಳು ೧೯೬೭ರ ಅನ್ವಯ ಮಾಡಲಾಗುತ್ತಿದೆ.

ವಿಮಾನಿನ ಕ್ಷಾಮದ ಬಗ್ಗೆ

೪೦೦ ಶ್ರೀ ವಸಂತ ವಿ.ಶೆಟ್ಟಿಸಾಲ್ಯಾನ(ಕಾಪು)--ಮಾನ್ಯ ವಿಮಾನುಗಾರಿಕೆ ಹಾಗೂ ಬಂದರುಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರಾವಳಿಯಲ್ಲಿ ಯಾಂತ್ರಿಕ ದೋಣಿಗಳ ವಿಾನುಗಾರರಿಗೆ ಈ ವರ್ಷ ವಿಮಾನಿನ ಕ್ಷಾಮವಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಆ ರೀತಿಯ ವಿಮಾನುಗಾರರಿಗೆ ಯಾವ ರೀತಿ ಪರಿಹಾರ ನೀಡಲಾಗುವುದು?

ಶ್ರೀ ಸಿ. ಬೈರೇಗೌಡ(ವಿಮಾನುಗಾರಿಕೆ ಮತ್ತು ಬಂದರು ಸಚಿವರು)—

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪೋಲೀಸ್ ಅಧಿಕಾರಿಗಳ ಹಾಗೂ ಪೇದೆಗಳ ಬಗ್ಗೆ

೧೯೬೦. ಶ್ರೀ ಬಸವರಾಜ ಪಾಟೀಲ್(ಹುಮನಾಬಾದ್) –ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೦ರಲ್ಲಿ ಪೋಲೀಸ್ ಇಲಾಖೆಯಲ್ಲಿದ್ದ ಅಧಿಕಾರಿಗಳೆಷ್ಟು ಹಾಗೂ ಪೋಲೀಸ್ ಪೇದೆಗಳ ಸಂಖ್ಯೆ ಎಷ್ಟು ಮತ್ತು ಈಗ ಎಷ್ಟು ಹೆಚ್ಚಾಗಿದೆ?

ಆ) ಕೆ.ಪಿ.ಎಸ್. ಪೋಲೀಸ್ ಅಧಿಕಾರಿಗಳಿಂದ ಮನೆ ಬಾಡಿಗೆಯನ್ನು ಪಡೆಯುತ್ತಿರುವುದು ನಿಜವೇ?

ಇ) ಉಳಿದ ಐಪಿಎಸ್ ಅಧಿಕಾರಿಗಳಿಗೆ ಕೊಡುವ ಬಾಡಿಗೆ ರಹಿತ ಮನೆಗಳನ್ನು ಅವರಿಗೂ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು)--

ಅ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ಕೊಡಲಾಗಿದೆ.

ಆ) ಹೌದು

ಇ) ಆರಕ್ಷಕ ಆಯುಕ್ತರಿಗೆ ಮತ್ತು ಜಿಲ್ಲಾ ಆರಕ್ಷಕ ಅಧೀಕ್ಷಕರಿಗೆ (ಐಪಿಎಸ್ ಮತ್ತು ಕೆಎಸ್‌ಪಿಎಸ್) ಮಾತ್ರ ಬಾಡಿಗೆ ರಹಿತ ಮನೆಗಳನ್ನು ಕೊಡಲಾಗಿದೆ.